**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 277 / 2018**

| | | |
|---|---|---|
| ಸಾಕ್ಷಿಯ ಹೆಸರು | : ಐಶ್ವರ್ಯ | |
| ಗಂಡನ ಹೆಸರು | : ನವೀನ್ ಕುಮಾರ್ | |
| ವಯಸ್ಸು | : 32 ವರ್ಷ | |
| ಉದ್ಯೋಗ | : ಗೃಹಿಣಿ | ಚಾಸಾ –3 |
| ವಾಸ ಸ್ಥಳ | : ಮದ್ದೂರು | ಫ್ರಾಸಾ –3 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 05.02.2025**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ಚಾಸಾ 1 ನನ್ನ ತಾಯಿ. ಚಾಸಾ 2 ನಮ್ಮ ಪಕ್ಕದ ಮನೆಯವರು. ಚಾಸಾ 4 ರಿಂದ ಚಾಸಾ 7 ರವರು ನಮ್ಮ ತಾಯಿಯ ಮನೆಯ ಅಕ್ಕಪಕ್ಕದವರು. ದಿನಾಂಕಃ 03.11.2016 ರಂದು ಸಂಜೆ 7.30 ರ ಸಮಯದಲ್ಲಿ ನನ್ನ ತಾಯಿ ಅಂಗಡಿಗೆ ಹೋಗಿ ಬರುವಾಗ ಇಬ್ಬರು ಆಸಾಮಿಗಳು ಬೈಕಿನಲ್ಲಿ ಬಂದು ನನ್ನ ತಾಯಿಯ ಕತ್ತಿನಲ್ಲಿದ್ದ 70 ಗ್ರಾಂ ನ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುತ್ತಾರೆ. ನನ್ನ ತಾಯಿ ಹೆದರಿಕೊಂಡು ಕಿರುಚಿದಾಗ ನಮ್ಮ ಅಕ್ಕ ಪಕ್ಕದ ಮನೆಯವರು ಹೋಗಿ ನೋಡಿ ನಂತರ ನನ್ನ ತಾಯಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದು ನಾವು ನಮ್ಮ ತಾಯಿಯನ್ನು ಕೇಳಿದಾಗ ಘಟನೆಯ ಬಗ್ಗೆ ಹೇಳಿರುತ್ತಾರೆ. ಬೈಕಿನ ಹಿಂಭಾಗ ಕುಳಿತ್ತಿದ್ದ ವ್ಯಕ್ತಿಯು ನನ್ನ ತಾಯಿಯ ಸರವನ್ನು ಕಿತ್ತುಕೊಂಡಿರುವುದಾಗಿ ತಿಳಿಸಿದರು. ಚಿನ್ನದ ಸರವನ್ನು ನೋಡಿದರೆ ಗುರುತಿಸುತ್ತೇನೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 277 / 2018**

| | | |
|---|---|---|
| ಸಾಕ್ಷಿಯ ಹೆಸರು | : ಬಿ.ಬಿ. ಸೋಗರ | |
| ಗಂಡನ ಹೆಸರು | : ಎಸ್. ಫಾಹಿಕ್ ಅಹಮದ್ | |
| ವಯಸ್ಸು | : 46 ವರ್ಷ | |
| ಉದ್ಯೋಗ | : ಗೃಹಿಣಿ | ಚಾಸಾ -2 |
| ವಾಸ ಸ್ಥಳ | : ಕೊಳ್ಳೇಗಾಲ | ಪ್ರಾಸಾ -2 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 05.02.2025

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ಚಾಸಾ 1 ರವರು ನನ್ನ ಪಕ್ಕದ ಮನೆಯವರು. ಚಾಸಾ 3 ರವರು ಚಾಸಾ 1 ರವರ ಮಗಳು. ಚಾಸಾ 4 ರಿಂದ ಚಾಸಾ 7 ರವರು ನಮ್ಮ ಮನೆಯ ಅಕ್ಕಪಕ್ಕದವರು. ಕೊಳ್ಳೇಗಾಲ ಪಟ್ಟಣದ ಬಸ್ತೀಪುರದ ಚಂದ್ರಶೇಖರ್ ರಸ್ತೆಯಲ್ಲಿರುವ ನಮ್ಮ ಮನೆಯ ಮುಂಭಾಗ ಸಂಜೆ 7.30 ರ ಸಮಯದಲ್ಲಿ 70 ಗ್ರಾಂ ನ ಚಿನ್ನದ ಸರ ಕಳ್ಳತನವಾಗಿರುತ್ತದೆ. ಚಾಸಾ 1 ರವರು ಕಳ್ಳ ಕಳ್ಳ ಎಂದು ಕೂಗಿಕೊಂಡಾಗ ಗೇಟ್ ಒಳಗಿನಿಂದ ನಾನು ಮತ್ತು ನಮ್ಮ ಹುಡುಗರು ಹೋಗಿ ನೋಡಿದ್ದು ಚಾಸಾ 1 ರವರು ಕೆಳಗೆ ಕುಳಿತಿದ್ದರು. ನಾನು ಅವರನ್ನು ವಿಚಾರಿಸಿದಾಗ ನನ್ನ ಚೈನು ನನ್ನ ಚೈನು ಎಂದು ಹೇಳಿ ಸುಸ್ತಾಗಿದ್ದರು ಅಷ್ಟರಲ್ಲಿ ನಾನು ಅವರ ಮನೆಯವರನ್ನು ಕರೆದಿರುತ್ತೇನೆ. ಪಲ್ಸರ್ ಬೈಕಿನಲ್ಲಿ ಬಂದ ಇಬ್ಬರು ಆಸಾಮಿಗಳು ಫಾಸ್ಟಾಗಿ ಹೋಗಿದ್ದನ್ನು ನಾನು ನೋಡಿದೆ ಕತ್ತಲಾಗಿದ್ದರಿಂದ ಗುರುತು ಹಿಡಿಯಲು ಆಗಿರುವುದಿಲ್ಲ. ನಂತರ ಚಾಸಾ 1 ರವರನ್ನು ಚಾಸಾ 1 ರವರ ಗಂಡ ಕರೆದುಕೊಂಡು ಹೋದರು. ನಂತರ ಎರಡು ಮೂರು ದಿನದ ನಂತರ ಪೋಲಿಸರು ಸ್ಥಳಕ್ಕೆ ಬಂದು ನನ್ನನ್ನು ವಿಚಾರಿಸಿದಾಗ ನಾನು ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಪೋಲಿಸರು ಘಟನಾ ಸ್ಥಳಕ್ಕೆ ಬಂದ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರಿಗೆ ಘಟನಾ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ. ಪೋಲಿಸರು ಸ್ಥಳ ಮಹಜರಿಗೆ ಬಂದಾಗ 11.00 ಗಂಟೆಯಾಗಿತ್ತು. ಸಾಕ್ಷಿಗೆ ನಿಪಿ-2 ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 277 / 2018**

| | | |
|---|---|---|
| ಸಾಕ್ಷಿಯ ಹೆಸರು | : ಹೇಮಾವತಿ | |
| ಗಂಡನ ಹೆಸರು | : ಶಿವಲಿಂಗಯ್ಯ | |
| ವಯಸ್ಸು | : 65 ವರ್ಷ | |
| ಉದ್ಯೋಗ | : ಗೃಹಿಣಿ | ಚಾಸಾ – 1 |
| ವಾಸ ಸ್ಥಳ | : ಕೊಳ್ಳೇಗಾಲ | ಪ್ರಾಸಾ – 1 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 05.02.2025**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 2 ಗೊತ್ತು. ಚಾಸಾ 2 ರವರು ನನ್ನ ಪಕ್ಕದ ಮನೆಯವರು. ಚಾಸಾ 3 ನನ್ನ ಮಗಳು. ಚಾಸಾ 4 ರಿಂದ ಚಾಸಾ 9 ರವರು ನಮ್ಮ ಮನೆಯ ಅಕ್ಕಪಕ್ಕದವರು. ದಿನಾಂಕಃ 03.11.2016 ರಂದು ಸಾಯಂಕಾಲ 7.30 ರ ಸಮಯದಲ್ಲಿ ನಾನು ಅಂಗಡಿಗೆ ಹೋಗಿ ಬರುತ್ತಿರುವಾಗ ಇಬ್ಬರು ಆಸಾಮಿಗಳು ಮುಖಕ್ಕೆ ಮಾಸ್ಕ್ ಹಾಕಿಕೊಂಡು ಬೈಕಿನಲ್ಲಿ ಬಂದು ನಾನು ಧರಿಸಿದ್ದ 70 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಬೈಕಿನ ಹಿಂದೆ ಇದ್ದ ಆಸಾಮಿಯು ಕಿತ್ತುಕೊಂಡು ಹೊರಟು ಹೋಗಿರುತ್ತಾನೆ. ಆಗ ನಾನು ಕಿರುಚಿಕೊಂಡಾಗ ಎದುರುಮನೆಯ ಚಾಸಾ 2 ರವರು ಬಂದು ನನ್ನನ್ನು ವಿಚಾರಿಸಿದಾಗ ನಾನು ನಡೆದ ವಿಷಯವನ್ನು ಹೇಳಿರುತ್ತೇನೆ. ನಂತರ ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಂತರ ಪೋಲಿಸರು ಸುಮಾರು ಎರಡು ವರ್ಷಗಳ ನಂತರ ನನ್ನನ್ನು ಕರೆದು ರೂ. 50,000/– ಗಳನ್ನು ಕೊಟ್ಟು ನಂತರ ಉಳಿಕೆ ಹಣ ಸಿಕ್ಕಿದರೆ ಕೊಡುತ್ತೇವೆ ಎಂದು ಹೇಳಿದರು. ನಂತರ ಪೋಲಿಸರು ಸುಮಾರು 4 - 5 ದಿನಗಳು ಬಿಟ್ಟು ಘಟನಾ ಸ್ಥಳಕ್ಕೆ ಬಂದು ಸ್ಥಳದಲ್ಲಿ ಪೋಟೋ ತೆಗೆದು ನಮ್ಮನ್ನು ವಿಚಾರಿಸಿರುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದಾಗ ಚಾಸಾ 2 ಮತ್ತು ಪಕ್ಕದ ಮನೆಯವರು ಇದ್ದರು. ಸದರಿ ಸ್ಥಳ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಪೋಲಿಸರು ಘಟನಾ ಸ್ಥಳಕ್ಕೆ ಎರಡು ಬಾರಿ ಬಂದಿರುತ್ತಾರೆ. ಕಳ್ಳತನ ಮಾಡಿದ ಆರೋಪಿಯು ಖರ್ಚು ಮಾಡಿರುವುದಾಗಿ ತಿಳಿಸಿದ್ದು ಅವರ ಬಳಿ 50,000/– ರೂ. ಮಾತ್ರ ಇರುವುದಾಗಿ ಹೇಳಿ ಅದನ್ನು ನನ್ನ ಬಳಿ ನೀಡಿದ್ದು ಉಳಿಕೆ ಹಣವನ್ನು ಮುಂದೆ ನೀಡುತ್ತೇವೆಂದು ತಿಳಿಸಿರುತ್ತಾರೆ. ಪೋಲಿಸರು ಘಟನೆಗೆ ಸಂಬಂಧಪಟ್ಟಂತೆ ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆರೋಪಿಯು ಮುಖಕ್ಕೆ ಮಾಸ್ಕ್ ಧರಿಸಿದ್ದ ಕಾರಣ ಮತ್ತು ಘಟನೆ ಕತ್ತಲೆಯಲ್ಲಿ ಆಗಿದ್ದರಿಂದ ನನಗೆ ಆರೋಪಿಯನ್ನು ಗುರುತಿಸಲು ಅಸಾಧ್ಯವಾಗಿರುತ್ತದೆ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.